ನಂತರದ ಪ್ರಮುಖ ಆಕರ್ಷಣೆಯಾಗಿ ಸಾಗುತ್ತಿದ್ದುದು ದೇವಸ್ಥಾನಕ್ಕಿಂತ ಮುಂಚೆ ಕಾಣುತ್ತಿದ್ದ ತರಕಾರಿ ಮಾರ್ಕೆಟ್‌ನ ಹಿಂದೆ ನಿಂತಿರುತ್ತಿದ್ದ ಪಾವ್‌ಭಾಜಿಯ ಗಾಡಿಗಳತ್ತ... ಅನೇಕ ಗಾಡಿಗಳು ನಿಂತಿರುತ್ತಿದ್ದರೂ 'ಬಾಳು'ನ ಪಾವ್‌ಭಾಜಿಗೆ ಬಲು ಬೇಡಿಕೆ. ಸರಿಯಾದ ದರದ ಜೊತೆ ತಿಂಡಿಯೂ ರುಚಿಕಟ್ಟಾಗಿರುತ್ತಿತ್ತು. ಎಷ್ಟೋ ಜನ ಅವನೊಂದಿಗೆ ಸ್ಪರ್ಧೆಗಿಳಿದರೂ ಯಾರಿಗೂ ಗೆಲ್ಲಲಾಗಿರಲಿಲ್ಲ. ಅವನ ಬೇಡಿಕೆ ಏರುತ್ತಲೇ ಹೋಗಿತ್ತು. ಅದು ಮಹಾರಾಷ್ಟ್ರ ಮೂಲದ ತಿಂಡಿಯಾದರೂ ಬೆಳಗಾವಿಯಲ್ಲಿ ಎಲ್ಲರಿಗೂ ಸರ್ವತ್ರವಾಗಿತ್ತು. ಇನ್ನೊಂದು ಮುಖ್ಯವಾದ ವಿಷಯವೆಂದರೆ ಹಿರಿಯರ ತಲೆಮಾರು ಹೀಗೆ ಬೀದಿಯಲ್ಲಿ ನಿಂತು ತಿನ್ನುವುದನ್ನು ಸುತಾರಾಂ ಇಷ್ಟಪಡುತ್ತಿರಲಿಲ್ಲ. ಈ ಹೊಸ ತಲೆಮಾರಿನ ಮೇಲೆ ಅವರಿಗೆ ವಿಪರೀತ ಕೋಪ. ಅದನ್ನು ಅನಾಗರಿಕ ವರ್ತನೆಯೆಂದೇ ಬಿಂಬಿಸಲಾಗುತ್ತಿತ್ತು. ಹಾಗಾಗಿ ಅವನಿಗೆ ಕಾಲೇಜು ಹುಡುಗರೇ ಮುಖ್ಯ ಗಿರಾಕಿಗಳು. ಮನೆಯಲ್ಲಿ ಸಾಧುವಾಗಿದ್ದು ಕದ್ದುಮುಚ್ಚಿ ಬಂದು ತಿನ್ನುವವರೂ ಇದ್ದರು. ನಾವೆಲ್ಲ ಹಾಗಲ್ಲ. ಸಾಫ್ ಸೀದಾ ಹೇಳಿ ದುಡ್ಡು ಕೇಳಿ ತಂದು ರಾಜಾರೋಷವಾಗಿ ತಿನ್ನುತ್ತಿದ್ದೆವು.

ಆ ಫಸ್ಟ್ ಗೇಟ್‌ನ ಬಳಿಯ ಗ್ರೌಂಡು ನನಗೆ ಒಮ್ಮೊಮ್ಮೆ ಮಾಯಾಬಜಾರಿನಂತೆ ಭಾಸವಾಗುತ್ತಿತ್ತು. ಮಧ್ಯಾಹ್ನ ಬಟಾಬಯಲು. ಏನೂ ಇರುತ್ತಿರಲಿಲ್ಲ. ಚಿಳ್ಳೆಪಿಳ್ಳೆಗಳು ಕ್ರಿಕೆಟ್, ಗೋಲಿ ಆಡುತ್ತಿದ್ದವು. ಐದು ಗಂಟೆಯಾಗುತ್ತಿದ್ದಂತೆ ತರಕಾರಿ ಬುಟ್ಟಿ ತಲೆಯ ಮೇಲೆ ಹೊತ್ತು ಹೆಂಗಳೆಯರು, ಗಂಡಸರು ಬಂದು ತಂತಮ್ಮ ಜಾಗಗಳನ್ನು ಭದ್ರಪಡಿಸಿಕೊಂಡು ತರಕಾರಿ ಹರಡಿ ಕುಳಿತುಕೊಳ್ಳುತ್ತಿದ್ದರು. ಆಗಲೇ ಪಾವ್‌ಭಾಜಿ, ಭೇಳ್‌ಪುರಿಯ ಗಾಡಿಗಳೂ ಬಂದು ನಿಲ್ಲುತ್ತಿದ್ದವು. ಅನತಿ ದೂರದಲ್ಲಿ ಕುಡಿಯಲು ನೀರಿಟ್ಟು, ತಟ್ಟೆ ತೊಳೆಯಲು ನೀರು ತುಂಬಿದ ಬಕೆಟ್ ಇಟ್ಟು... ಸಜ್ಜಾಗುತ್ತಿದ್ದವು. ಬಾಳು ತಳ್ಳುಗಾಡಿಯ ಮಧ್ಯದಲ್ಲಿದ್ದ ಸ್ಟವ್ ಹೊತ್ತಿಸುತ್ತಿದ್ದಂತೆ 'ಭರ್ರ್...' ಎಂಬ ಶಬ್ದವಾಗುತ್ತಿತ್ತು. ಗಿರಾಕಿಗಳು ಗಾಡಿಯ ಸುತ್ತ ಬಂದು ನಿಲ್ಲುತ್ತಿದ್ದರು. ಮೊದಲು ಸ್ಟವ್‌ನ ಮೇಲೆ ದಪ್ಪ ತಳದ ತವಾ ಇಟ್ಟು ಕಾಯಿಸುತ್ತಿದ್ದ. ಬಳಿಕ ಮನೆಯಿಂದ ಸ್ಟೀಲಿನ ಡಬ್ಬದಲ್ಲಿ ತಂದ ಅರೆಬೆಂದ ಭಾಜಿಯನ್ನು ಅದರಲ್ಲಿ ಸುರಿಯುತ್ತಿದ್ದ. ಆಲೂಗಡ್ಡೆ, ಈರುಳ್ಳಿ, ಹೂಕೋಸು, ಬಟಾಣಿ ಎಲ್ಲ ದೊಡ್ಡದಾಗಿ ಕಾಣುತ್ತಿದ್ದವು. ಅವಕ್ಕೆ ಒಂದಷ್ಟು ಮಸಾಲೆಗಳನ್ನು ಸೇರಿಸಿ ಸ್ಟೀಲಿನ ಹಿಡಿಯಿಂದ ತಿಕ್ಕಲಾರಂಭಿಸಿದರೆ ಸಾಕು... ಅದು ಕೊತಕೊತ ಕುದಿಯುತ್ತ ಏಕರೂಪವಾಗಿ ಮುದ್ದೆಯಂತಾಗುತ್ತಿತ್ತು. ಆಗ ಅದು ಗಡಿಯ ಗಲಾಟೆ ಮರೆತು ಭಾಷಾತೀತ, ಜಾತ್ಯತೀತ, ಧರ್ಮಾತೀತವಾಗಿ... ಏಕಜೀವವಾಗಿ... ಭಾರತ ಮಾತೆಯಲ್ಲಿ ಐಕ್ಯವಾದಂತೆ ಭಾಸವಾಗುತ್ತಿತ್ತು. ಚಪ್ಪಟೆಯಾಗಿದ್ದ ಹಿಡಿಯಿಂದ ಬಾಳು ತಿಕ್ಕುತ್ತಿದ್ದರೆ ನನಗೆ ಗಡಿಯಲ್ಲಿನ ವೈಷಮ್ಯ, ವೈರುಧ್ಯಗಳನ್ನು ತಿಕ್ಕಿ ಹದವಾಗಿಸಿದಂತೆ ಭಾಸ. ಅವನೊಬ್ಬ ದಾರ್ಶನಿಕನಂತೆ ಕಾಣುತ್ತಿದ್ದ. ರಾಜಕೀಯವಾಗಿ ಅವನಂತೆ ಯಾರಾದರೂ ನಿಂತು... ಎಲ್ಲ ವಿರೋಧಾಭಾಸಗಳನ್ನೂ ಸರಿಯಾಗಿ ತಿಕ್ಕಿ ಗಲಾಟೆಗಳನ್ನೆಲ್ಲ ಕೊನೆಗೊಳಿಸಬಾರದೇ ಎನಿಸಿದ್ದುಂಟು. ಅವನ ಗಾಡಿಯ ಮುಂದೆ ಯಾವ ಭೇದ, ಭಾವವೂ ಇಲ್ಲ. ಎಲ್ಲರೂ ಒಂದೇ...

ಅವ ತಿಕ್ಕಿದಷ್ಟೂ ಕಂದು ಬಣ್ಣಕ್ಕೆ ತಿರುಗಿ ಸುವಾಸನೆ ಹೊಮ್ಮಿಸುತ್ತ ನಮ್ಮ ಘ್ರಾಣೇಂದ್ರಿಯಗಳನ್ನು ಚುರುಕುಗೊಳಿಸುತ್ತಿತ್ತು ಭಾಜಿ. ಆ ಒಂದೇ ಚಿಕ್ಕ ಗಾಡಿಯಲ್ಲಿ ಅವನೆಷ್ಟು ಚೆನ್ನಾಗಿ ಬೇಕಾಗುವ ಸಾಮಗ್ರಿಗಳನ್ನೆಲ್ಲ ಜೋಡಿಸಿಕೊಂಡಿರುತ್ತಿದ್ದ. ಅದೊಂದು ಮಾಯಕದ ಗೋಲದಂತೆ ಭಾಸವಾಗುತ್ತಿತ್ತು. ಮೇಲೆ ಅಲಂಕರಿಸುವ ಪದಾರ್ಥಗಳೆಲ್ಲ ಸಾಲಾಗಿ ಗಾಜಿನ ಜಾಡಿಗಳಲ್ಲಿ ಕುಳಿತಿರುತ್ತಿದ್ದವು. ಒಮ್ಮೆ ಅವುಗಳ ಬಾಯಿ ತೆರೆದರೆ ಮುಚ್ಚಲು ಸಾಧ್ಯವಿರದಷ್ಟು ಜನ. "ಅದಿ ಮಲಾ ದೇ... (ಮದಲ ನನಗ ಕೊಡು)" ಎಂದೊಬ್ಬರು ಹೇಳಿದರೆ ಮತ್ತೊಬ್ಬರು, "ನಾ ಆವಾಗನ ಹೇಳೇನಿ. ಎಷ್ಟೊತ್ತಾತು" ಎಂದು ಹರಿಹಾಯುತ್ತಿದ್ದರು. ಬಾಳು ಅಷ್ಟೇ ಶಾಂತಚಿತ್ತನಾಗಿ, "ಕೊಟ್ಟೆ...